**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 715/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ01**

**ದಿನಾಂಕಃ 13.03.2026** **ಸಿಡಬ್ಲ್ಯೂ01**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ವಕೀಲರಿಂದಃ**

ಆರೋಪಿತರು ನನ್ನ ಸಂಬಂದಿಕರು ಎಂದರೆ ಸರಿಯಲ್ಲ. ಆರೋಪಿತರ ಹಾಗೂ ನನ್ನ ಅತ್ತೆ ಚಾಸಾ.4 ರವರ ನಡುವೆ ಆಸ್ತಿ ವಿಚಾರವಾಗಿ ಜಗಳವಿತ್ತು ಎಂದರೆ ಸಾಕ್ಷಿಯು ಖಾಲಿ ಜಾಗದ ವಿಚಾರವಾಗಿ ಜಗಳವಿತ್ತು ಎಂದು ನುಡಿಯುತ್ತಾರೆ. ನಿಪಿ.1 ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ.2 ಮತ್ತು 3 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಯಾವ ದಿನಾಂಕ ಆಗಿರುತ್ತದೆ ಎಂದರೆ ಸಾಕ್ಷಿಯು 5 ವರ್ಷಗಳ ಹಿಂದೆ ಒಂದು ದಿನ ರಾತ್ರಿ 9.00 ಗಂಟೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಮತ್ತು ಆರೋಪಿತರ ನಡುವೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯಗಳು ಇವೆ ಎಂದರೆ ಸರಿ. ಅದೇ ರೀತಿ ಆರೋಪಿತರು ಸಹ ನಮ್ಮ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ಪ್ರಕರಣ ಸಂಖ್ಯೆ ಸಿಸಿ 713/2023 ಇದೇ ನ್ಯಾಯಾಲಯದಲ್ಲಿ ಚಾಲ್ತಿ ಇದೆ ಎಂದರೆ ಸರಿ. ನಮ್ಮ ಮನೆಯಿಂದ ಠಾಣೆಗೆ ಅರ್ಧ ಕಿ ಮೀ ಅಂತರದಲ್ಲಿದೆ. ಗಲಾಟೆಯಾದ 4 ದಿನಗಳ ನಂತರ ದೂರು ದಾಖಲಿಸಿರುತ್ತೇನೆ. ಆರೋಪಿತರು ನಮ್ಮ ವಿರುದ್ಧ ದೂರು ನೀಡಿದ ನಂತರ ನಾವು ಅವರ ವಿರುದ್ಧ ದೂರು ನೀಡಿರುತ್ತೇವೆ ಎಂದರೆ ಸರಿ. ನಾನು ಆರೋಪಿತರೊಂದಿಗೆ ಗಲಾಟೆ ಮಾಡಿದ್ದರಿಂದ ಅವರು ನಮ್ಮ ವಿರುದ್ಧ ದೂರು ದಾಖಲಿಸಿದ್ದರಿಂದ ನಾವು ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮೊಂದಿಗೆ ಯಾವುದೇ ರೀತಿ ಗಲಾಟೆ ಮಾಡಿಲ್ಲ, ಹಲ್ಲೆ ಮಾಡಿಲ್ಲ ಮತ್ತು ನನ್ನನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ನಿಪಿ.4 ನ್ನು ಠಾಣ ಆವರಣದಲ್ಲಿ ತೆಗೆದ ಛಾಯ ಚಿತ್ರ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮನೆ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಗಲಾಟೆ ದಿನ ನಾನು ನೈಟಿಯನ್ನು ಧರಿಸಿದ್ದೆನು. ಗಲಾಟೆ ದಿನ ನಿಪಿ.4 ರಲ್ಲಿ ಕಾಣುತ್ತಿರುವ ಕೆಂಪು ನೈಟಿ ನಾನು ಗಲಾಟೆ ದಿನ ಧರಿಸಿದ್ದ ನೈಟಿ ಅಲ್ಲ ಎಂದರೆ ಸರಿಯಲ್ಲ. ನಿಪಿ.1 ದೂರಿನಲ್ಲಿ ನಾನು ನೈಟಿ ಧರಿಸಿದ್ದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ನಾನು ನ್ಯಾಯಾಲಯಕ್ಕೆ ನನ್ನ ಹೇಳಿಕೆ ನೀಡುವ ಸಂದರ್ಭದಲ್ಲಿ ಬಟ್ಟೆ ಎಂದು ಮಾತ್ರ ಹೇಳಿದ್ದು ನೈಟಿ ಹರಿದಿತ್ತು ಎಂದು ಹೇಳಿಲ್ಲ ಎಂದರೆ ಸರಿ. ನಾನು ಹೇಳಿದ ಹೇಳಿಕೆಗಳು ಒಂದುಕ್ಕೊಂದು ವ್ಯತಿರಿಕ್ತವಾಗಿವೆ ಎಂದರೆ ಸರಿಯಲ್ಲ. ಮು.ಮಾ 1 ಘಟನಾ ದಿನ ಧರಿಸಿದ ಬಟ್ಟೆ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ